**ಪಾಠ–12** **ಜೂನ್ 11–17**

# ಐಗುಪ್ತದ ಪ್ರಭು – ಯೋಸೇಫ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 41:37–46; 7 ಅರಸು 3:12, ಆದಿಕಾಂಡ 42, ರೋಮಾಪುರ 5:7–11, ಆದಿಕಾಂಡ 43, 44, 45.

**ಸ್ಮರಣವಾಕ್ಯ : "ಮತ್ತು ಫರೋಹನು ಯೋಸೇಫನಿಗೆ, 'ನೋಡು ನಾನು ನಿನ್ನನ್ನು ಐಗುಪ್ತದ ಮೇಲೆಲ್ಲ ಅಧಿಕಾರಿಯನ್ನಾಗಿ ನೇಮಿಸಿದ್ದೇನೆ" ಎಂದನು.** (ಆದಿಕಾಂಡ 41:41).

ಯೋಸೇಫನು ಈಗ ಐಗುಪ್ತದ ಅಧಿಕಾರಿಯಾಗಿದ್ದಾನೆ ಮತ್ತು ತನ್ನ ಸ್ವಂತ ಸಹೋದರರು ಆತನನ್ನು ತಿಳುಕೊಳ್ಳಲಾಗದೇ, ಅವನಿಗೆ ಅಡ್ಡಬೀಳುವರು (ಆದಿಕಾಂಡ 42). ಬೆನ್ಯಾಮಿನ್‌ನನ್ನು ಕೂಡ ಕರೆತರಬೇಕೆಂದು ತನ್ನ ಸಹೋದರರನ್ನು ಯೋಸೇಫನು ಒತ್ತಾಯ ಮಾಡಲು (ಆದಿಕಾಂಡ 43) ಅವರು ತಮ್ಮನ್ನು ತಗ್ಗಿಸಿಕೊಂಡರು ಮತ್ತು–ಬೆನ್ಯಾಮಿನ್‌ನ ಸುರಕ್ಷತೆಯ ಬಗ್ಗೆ ಅಪಾಯ ಬಂದಿದೆ ಎಂದು ನೆನಸಿದಾಗ, ಅವರು "ಫರೋಹನಿಗೆ ಸಮನಾದ" ಆ ಮಹಾಅಧಿಕಾರಿಯ ಮುಂದೆ ಕರುಣೆಗಾಗಿ ಮೊರೆಯಿಡುತ್ತಾರೆ. ಕೊನೆಗೆ, ಅವರಿಗೆ ತನ್ನ ಗುರುತನ್ನು ತೋರಿಸಿಕೊಡಲು, ತಾವು ಏನೇ ಮಾಡಿದ್ದಾಗ್ಯೂ, ದೇವರು ಎಲ್ಲವನ್ನೂ ಒಳ್ಳೆಯದು ಮಾಡಿದ್ದಾನೆಂದು ತಿಳಿಯುವರು.

* **ಈ ಪಾಠವನ್ನು ಜೂನ್ 18ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಸ್ವಾರಸ್ಯಕರವಾಗಿ ಮುಂದಿನ ಘಟನೆಗಳು ಪೂರ್ಣ ಸರಣಿಯಲ್ಲಿ, ಯೋಸೇಫನ ಯಶಸ್ಸಿನ ಬಗ್ಗೆ ಹೇಳುತ್ತದೆ ಎಂದು ಭಾವಿಸಿದರೂ, ಅವುಗಳು ಆತನ ಸಹೋದರರ ಪಶ್ಚಾತ್ತಾಪದ ಬಗ್ಗೆ ಹೆಚ್ಚಾಗಿ ನಿರೂಪಿಸುತ್ತವೆ. ಯೋಸೇಫನಿಂದ ತಮ್ಮ ತಂದೆಯ ಬಳಿಗೆ ಹಿಂದೆ-ಮುಂದೆಯ ಪ್ರಯಾಣಗಳು, ಅವರು ಎದುರಿಸಿದ ತೊಡಕುಗಳು, ಅವರು ತಮ್ಮ ತಮ್ಮನಿಗೆ ತೋರಿದ ದುಷ್ಟಕೃತ್ಯಗಳು, ತಮ್ಮ ತಂದೆಗೆ ಮಾಡಿದ ದ್ರೋಹ, ಮತ್ತು ದೇವರಿಗೆ ಮಾಡಿದ ಅಪರಾಧಗಳನ್ನು ಜ್ಞಾಪಿಸಿಕೊಳ್ಳಲು ಅನುಕೂಲಿಸಿದವು. ಆ ಪೂರ್ಣ ಅನುಭವದಲ್ಲೆಲ್ಲಾ ಅದು ಒಂದು ದೈವ ದಂಡನೆಯೆಂದು ತಿಳಿದರು. ಆದರೂ, ಭಾವನಾತ್ಮಕ ಘಟ್ಟದ ಅಂತ್ಯದಲ್ಲಿ, ಎಲ್ಲರೂ ಕಣ್ಣೀರಿಟ್ಟು ಆನಂದ ಪಡುವಂತೆ ಆಗುತ್ತದೆ. ಹಾಗೆಯೇ ಅವರ ಅನ್ಯಾಯದ ದುಷ್ಕೃತ್ಯಗಳ ಹೊರತಾಗಿಯೂ ಅವರಿಗೆ ಕ್ಷಮಾಪಣೆಯ ಸಂದೇಶವನ್ನು ಹೊಂದಿತ್ತು.

**ಭಾನುವಾರ** **ಜೂನ್ 12**

## ಯೋಸೇಫನು ಅಧಿಕಾರಕ್ಕೆ ಏರಿಸಲ್ಪಟ್ಟದ್ದು

ಫರೋಹನಿಗಾದ ಕನಸುಗಳಲ್ಲಿ ದೇವರು ದೇಶದಲ್ಲಿ "ಮಾಡಬೇಕೆಂದಿರುವುದನ್ನು" (ಆದಿಕಾಂಡ 41:28). ಆದರೂ, ಯೋಸೆಫನು ಫರೋಹನಿಗೆ ತನ್ನ ದೇವರನ್ನು ದೇವರನ್ನು ನಂಬಬೇಕೆಂದು ಹೇಳಲಿಲ್ಲ. ಬದಲಿಗೆ, ಯೋಸೇಫನು ತುರ್ತಿನ ಕಾರ್ಯದ ಬಗ್ಗೆ ಮಾತಾಡುತ್ತಾನೆ. ಆತನು ಒಂದು ಆರ್ಥಿಕ ಯೋಜನೆಯನ್ನು ಪ್ರಸ್ತಾಪಿಸುತ್ತಾನೆ. ಸ್ವಾರಸ್ಯಕರವಾಗಿ ಫರೋಹನು ಈ ಆರ್ಥಿಕ ಆಲೋಚನೆಯನ್ನು ಮಾತ್ರ ಯೋಸೇಫನಿಂದ ತೆಗೆದುಕೊಳ್ಳುವಲ್ಲಿ ಆಸಕ್ತನಾಗಿದ್ದಾನೆ. ಅವನ ಮಾತುಗಳಿಂದ ಕನಸಿನ ಆತ್ಮೀಕ ಅರ್ಥವನ್ನಾಗಲೀ ಮತ್ತು ಅದನ್ನು ಉಂಟುಮಾಡಿದ ದೇವರ ಪಾತ್ರವನ್ನು ತಿಳಿಯಲು ಮನಸ್ಸು ಮಾಡಲಿಲ್ಲ.

ಆದಿಕಾಂಡ 41:35-57ನ್ನು ಓದಿರಿ. ಯೋಸೇಫನ ಯಶಸ್ಸಿನಲ್ಲಿ ದೇವರ ಪಾತ್ರವೇನು?

ಫರೋಹನು ಯೋಸೇಫನನ್ನು ಆ ಉಸ್ತುವಾರಿ ತೆಗೆದುಕೊಳ್ಳಲು ಹೇಳಿದ್ದು, ಆತನು ಕನಸುಗಳ ಅರ್ಥವನ್ನು ಸರಿಯಾಗಿ ಹೇಳಿದನು ಅಥವಾ ಮುಂದೆ ದೇಶಕ್ಕೆ ಬರುವ ಸಮಸ್ಯೆಯನ್ನು ತಿಳಿಸಿದನೆಂಬ ಸೀಮಿತಕಾರಣಕ್ಕಲ್ಲ, ಆದರೆ ಸಮಸ್ಯೆಗೆ

ಆತನಲ್ಲಿ ಪರಿಹಾರೋಪಾಯ ಇತ್ತು ಮತ್ತು ಫರೋಹನು ಸೇವಕರಿಗೂ ಅದು ಒಳ್ಳೆಯದಾಗಿ ತೋಚಿದ್ದರಿಂದ" (ಆದಿ 41:37) ಹಾಗೆ ಹೇಳಿದನು. ಫರೋಹನ ಆಯ್ಕೆಯು ಧಾರ್ಮಿಕ ಕಾರಣದ ಬದಲು ರಾಷ್ಟ್ರ ಪ್ರಯೋಜನದ ದೃಷ್ಟಿಯೇ ಇದ್ದಿರಬೇಕು. ಆದರೂ ಫರೋಹನು ಯೋಸೇಫನಲ್ಲಿ "ದೇವರು ಆತ್ಮನು" ಇರುವುದನ್ನು ಮತ್ತು "ಬುದ್ಧಿವಿವೇಕಗಳನ್ನು" ದೇವರು ಕೊಡುವ ಜ್ಞಾನದ ಲಕ್ಷಣವಾಗಿರುವ (ಆದಿ 41:33 ಮತ್ತು 1 ಅರಸು 3:12 ಹೋಲಿಸಿ) "ಬುದ್ಧಿವಿವೇಕಗಳನ್ನು" ಹೊಂದಿರುವುದನ್ನು ಗುರುತಿಸುತ್ತಾನೆ.

ಬೈಬಲ್‌ನಲ್ಲಿ ಬರೆಯಲಾದ ಈ ಎಲ್ಲಾ ವಿಷಯಗಳು ಐಗುಪ್ತದ ಆ ಕಾಲದ ಐತಿಹಾಸಿಕ ಸ್ಥಿತಿಯನ್ನು ಬಿಂಬಿಸುತ್ತವೆ. ಯೋಸೇಫನು ಐಗುಪ್ತದ ಅಧಿಕಾರಿಯನ್ನಾಗಿ ನೇಮಿಸಿದ್ದು, ಅದರ ಇತಿಹಾಸದಲ್ಲಿ, ಹೊರದೇಶದ ವಜೀರ (ಮಂತ್ರಿ)ರನ್ನು ನೇಮಿಸಿಕೊಳ್ಳುವುದರ ರೂಢಿಗನುಸಾರವಾಗಿತ್ತು.

ಮುಂದಿನ ಏಳು ವರುಷಗಳ ಸಮೃದ್ಧಿಯು ಎಷ್ಟು ಗುರುತರವಾಗಿತ್ತೆಂದರೆ, ಧಾನ್ಯದ ಉತ್ಪಾದನೆಯು ಲೆಕ್ಕ ಮಾಡಲಾಗದಷ್ಟು" (ಆದಿ 41:49) ಆಯಿತು. ಇದು ಪ್ರಕೃತಿಗೆ ಮೀರಿದ ಅನುಗ್ರಹಕ್ಕೆ ಸಂಕೇತವಾಗಿತ್ತು. "ಸಮುದ್ರದ ಉಸುಬಿನಂತೆ" (ಆದಿ 41:49) ಎಂಬ ಹೋಲಿಕೆಯು ದೇವರ ಆಶೀರ್ವಾದವನ್ನು ತೋರಿಸುತ್ತದೆ (ಆದಿ 22:17). ಯೋಸೇಫನು ಸಹ ವಯಕ್ತಿಕವಾಗಿ ಅದೆ ಆಶೀರ್ವಾದವನ್ನು ಸಂತಾನೋತ್ಪತ್ತಿ ಹೊಂದುವಲ್ಲಿ ಕಂಡುಕೊಳ್ಳುವನು. ಇದು ಈ ಎರಡೂ ಕಾರ್ಯಗಳಲ್ಲಿ ಅದೇ ದೇವರ ಅನುಗ್ರಹವು ಇರುವುದರ ಸಾಕ್ಷಿ. ತನ್ನ ಎರಡು ಗಂಡುಮಕ್ಕಳಿಗೆ ಯೋಸೇಫನು ಇಟ್ಟ ಹೆಸರುಗಳಿಂದ ದೇವರ ವರಪ್ರಸಾದದ ಫಲದಲ್ಲಿ ದೇವರು ತನ್ನ ನೋವಿನ ಬದಲು ಆನಂದ (ಮನಸ್ಸೆ) ಮತ್ತು ಹಿಂದಿನ ಸಂಕಟದಲ್ಲಿ ಅಭಿವೃದ್ಧಿಯನ್ನು (ಎಫ್ರಾಯಿಮ್) ಕೊಟ್ಟಿದ್ದಾನೆಂದು ನೋಡಬಹುದು. ದೇವರು ಒಂದು ಕೆಟ್ಟದ್ದನ್ನು ಒಳ್ಳೆಯದಕ್ಕೆ ಹೇಗೆ ತಿರುಗಿಸಿದನೆಂಬುದಕ್ಕೆ ಎಂತಹ ಬಲವಾದ ಸಾಕ್ಷಿ!

ನಾವು ಜೀವಿಸುತ್ತಿರುವ ರೀತಿಯಿಂದ ನಮ್ಮ ದೇವರ ವಾಸ್ತವಿಕತೆಯನ್ನು, ಬೇರೆ ಜನರು ಕಂಡುಕೊಳ್ಳುವ ಮಾರ್ಗಗಳೇನಾಗಿರಬೇಕು?

**ಸೋಮವಾರ** **ಜೂನ್ 13**

## ಯೋಸೇಫನು ತನ್ನ ಸಹೋದರರನ್ನು ಸಮಾಧಾನಪಡಿಸಿದನು

ಆದಿಕಾಂಡ 42ನ್ನು ಓದಿರಿ. ಇಲ್ಲಿ ಏನಾಯಿತು ಮತ್ತು ಮಾನವನ ದುಷ್ಟತನ ಹಾಗೂ ಕೆಡುಕಿನ ನಡುವೆಯೂ ದೈವ ನಿಯಾಮಕವನ್ನು ಇದು ಹೇಗೆ ತೋರಿಸುತ್ತಿದೆ?

ಬರಗಾಲವು ಯಾಕೋಬನು ತನ್ನ ಮಕ್ಕಳನ್ನು ಐಗುಪ್ತಕ್ಕೆ ಧಾನ್ಯಕೊಳ್ಳಲು ಕಳುಹಿಸುವಂತೆ ಮಾಡುತ್ತದೆ? ಯಾಕೋಬನೇ ಈ ಯೋಚನೆಯನ್ನು ತಂದದ್ದು (ಆದಿ 42:1) ಆಶ್ಚರ್ಯವೇ. ದೌರ್ಭಾಗ್ಯ ಮುದುಕ, ತನ್ನ ಹಿಡಿತದಲ್ಲಿದ್ದ ಪರಿಸ್ಥಿತಿಗಳಿಗೆ ಬಲಿಯಾದವನು, ಅರಿವಿಲ್ಲದಯೇ, ಅನೇಕ ಆಶ್ಚರ್ಯಕರ ಘಟನೆಗಳ ಸರಮಾಲೆಯನ್ನೇ ಪ್ರಾರಂಭಿಸಿದನು. ಇದು ತಾನು ಯಾವ ಮಗನಿಗಾಗಿ ಇಷ್ಟು ಕಾಲ ಗೋಳಾಡಿದನೋ ಅವನೊಂದಿಗೆ ಒಂದಾಗುವುದಕ್ಕೆ ನಡೆಸುತ್ತದೆ.

ಈ ಭೇಟಿಯಲ್ಲಿ ದೈವಾನುಗ್ರಹದ ರೂಪವು ಇದೆ ಎಂದು ಎದ್ದುಕಾಣುವುದಕ್ಕೆ ಎರಡು ಮೂಲಾಧಾರ ಅಂಶಗಳ ಸಹಾಯ ಮಾಡುತ್ತದೆ. ಮೊದಲಿಗೆ, ಇದು ಯೋಸೇಫನ ಕನಸುಗಳು ನೆರವೇರುವುದರಲ್ಲಿ ನೋಡುವೆವು. ಯೋಸೇಫನ ಪ್ರವಾದನಾತ್ಮಕ ಕನಸಿನಲ್ಲಿ "ನಿಮ್ಮ ಸಿವುಡುಗಳು ನನ್ನ ಸಿವುಡಿಗೆ ಅಡಬಿದ್ದವು" (ಆದಿ 37:7) ಎಂಬುದು ಈಗ ನಡೆಯುತ್ತಿದೆ. "ಯೋಸೇಫನು ಐಗುಪ್ತದ ಮೇಲೆಲ್ಲ ಇದ್ದ ಅಧಿಕಾರಿ" (ಆದಿ 42:6) ಮತ್ತು "ದೇಶಾಧಿಪತಿ" (ಆದಿ 42:30,33). ಯೋಸೇಫನ ಮಹಾ ಅಧಿಕಾರದ ಸ್ಥಾನವು ತನ್ನ ಸೋದರರ ಬಡತನದ ಸ್ಥಿತಿಗೆ ವಿರುದ್ಧವಾಗಿತ್ತು: "ಅವರು ಅವನ ಮುಂದೆ ನೆಲೆಮುಟ್ಟುವಷ್ಟು ತಲೆಬಾಗಿ ವಂದಿಸಿದರು" (ಆದಿ 42:6). ಇವರೇ ಯೋಸೇಫನ ಕನಸಿನ ಬಗ್ಗೆ ಗೇಲಿ ಮಾಡಿ ಅದು ನೆರವೇರುವುದನ್ನು ಅಲ್ಲಗಳೆದಿದ್ದವರು (ಆದಿ 37:8).

ಎರಡನೆಯದಾಗಿ, ಈ ದೈವೀಕ ಅನುಗ್ರಹದ ಭೇಟಿಯು ಅವರ ಪ್ರತಿಕ್ರಿಯೆಯನ್ನು ವ್ಯಕ್ತಮಾಡುತ್ತಿದೆ. ಈ ಉಲ್ಲೇಖದಲ್ಲಿ ಬಳಸಿರುವ ಪದಗಳು ಮತ್ತು ಅಂಶಗಳು ಅವರಿಗಾದ ದಂಡನೆಯ ಘಟನೆಗಳಲ್ಲಿ ಅದು ಪ್ರತಿಧ್ವನಿಸುತ್ತದೆ. ಅವರು ಮೂರುದಿನ ಸೆರೆಮನೆಯಲ್ಲಿದ್ದರು (ಆದಿಕಾಂಡ 42:17). ಯೋಸೆಫನು ಸೆರೆಯಲ್ಲಿದ್ದನು (ಆದಿ 40:3,4). ಈಗ ಆಗುತ್ತಿರುವುದನ್ನು ಸುಮಾರು 20 ವರ್ಷಗಳ ಹಿಂದೆ ಮಾಡಿದ್ದ ತಮ್ಮ ಕೃತ್ಯಗಳಿಗೆ ಸಂಬಂಧ ಕಲ್ಪಿಸುತ್ತಿದ್ದಾರೆ. "ಅವರು ಒಬ್ಬರಿಗೊಬ್ಬರು, 'ನಾವು

ನಮ್ಮ ತಮ್ಮನಿಗೆ ಮಾಡಿದ್ದು ದ್ರೋಹವೇ ಸರಿ. ಅವನು ನಮ್ಮನ್ನು ಬೇಡಿಕೊಂಡಾಗ ನಾವು ಅವನ ಪ್ರಾಣಸಂಕಟವನ್ನು ತಿಳಿದರೂ ಅವನ ಮೊರೆಗೆ ಕಿವಿಗೊಡಲಿಲ್ಲ; ಆ ಕಾರಣದಿಂದಲೇ ಈ ಸಂಕಟವು ನಮಗೆ ಬಂದಿದೆ' ಎಂದು ಮಾತಾಡಿಕೊಂಡರು" (ಆದಿ 42:21).

"ಅವನ ಪ್ರಾಣಹತ್ಯದ ಅಪರಾಧವು ಈಗ ನಮಗೊದಗಿದೆ" (ಆದಿ 42:22) ಎಂಬ ರೂಬೇನನ ಈಗಿನ ಮಾತು, ಅಂದು, "ಪ್ರಾಣಹತ್ಯ ಮಾಡಬೇಡಿರಿ" (ಆದಿ 37:22) ಎಂಬ ಆತನ ಎಚ್ಚರಿಕೆಯ ಮಾರ್ದನಿಸುತ್ತದೆ ಮತ್ತು ಅವನು ಅಂದು ಮಾಡಿದ್ದರ ಫಲವು ಈಗ ಅವರಿಗೆ ಪ್ರಾಪ್ತವಾಗಿದೆ ಎಂಬುದನ್ನು ದೃಢಪಡಿಸುತ್ತದೆ.

ನಾವು ಮಾಡಿದ ಕೃತ್ಯಗಳಿಗೆ ನಾವು ಅನೇಕ ಸಲ ಪಶ್ಚಾತ್ತಾಪ ಪಡಬಹುದು. ನಾವು ಮಾಡಿರುವ ತಪ್ಪುಗಳನ್ನು ಸರಿಮಾಡಿಕೊಳ್ಳಲು ಸಾಧ್ಯವಾದಷ್ಟು ಮಟ್ಟಿಗೆ ಹೇಗೆ ಪ್ರಯತ್ನಿಸಬೇಕು ಮತ್ತು ಯೇಸುವಿನಲ್ಲಿ ದೇವರ ಕ್ಷಮಾಪಣೆಯ ವಾಗ್ದಾನಗಳನ್ನು ಸ್ವೀಕರಿಸುವುದು ಅತಿ ಪ್ರಾಮುಖ್ಯವೇತಕೆ? (ರೋಮಾಪುರ 5:7–11)?

**ಮಂಗಳವಾರ** **ಜೂನ್ 14**

## ಯೋಸೇಫನು ಮತ್ತು ಬೆನ್ಯಾಮಿನನು

ಯಾಕೋಬನು ಬೆನ್ಯಾಮಿನನ್ನು ಸುಲಭದಲ್ಲಿ ಕಳುಹಿಸಿಕೊಡುವುದಕ್ಕೆ ಒಪ್ಪಲಿಲ್ಲ. ಕಾರಣ, ರಾಹೇಲ ಪುತ್ರರಲ್ಲಿ ಈ ಒಬ್ಬನು ಮಾತ್ರ ತನ್ನ ಬಳಿಯಲ್ಲಿದ್ದಾನೆ. ಯೋಸೆಫನಂತೆ ಇವನು ಸಹಾ ಕಳೆದುಹೋದಾನೆಂಬ ಭಯವಿತ್ತು (ಆದಿ 43:6–8). ಮನೆಯಲ್ಲಿ ಆಹಾರವೆಲ್ಲಾ ತೀರಿದ ಮೇಲೆಯೇ (ಆದಿ 43:2) ಮತ್ತು ಬೆನ್ಯಾಮಿನನ್ನು ಪುನಃ ಕರೆತರುವುದಕ್ಕೆ ಪೂರ್ಣ ಹೊಣೆಹೊತ್ತ ನಂತರವೇ ಅವರು ಐಗುಪ್ತಕ್ಕೆ ಎರಡನೆಯ ಬಾರಿ, ಅದೂ ಬೆನ್ಯಾಮಿನನ್ನು ಕರೆದೊಯ್ಯಲು ಒಪ್ಪಿದನು.

ಆದಿಕಾಂಡ ಓದಿರಿ ನಂತರ ಸಂಭವಿಸಿದ ಘಟನಾವಳಿಗಳಲ್ಲಿ ಬೆನ್ಯಾಮಿನನ ಇರುವಿಕೆ ಯಾವ ಪರಿಣಾಮ ಹೊಂದಿತ್ತು?

ಎಲ್ಲಾ ಘಟನೆಗಳಲ್ಲಿ ಬೆನ್ಯಾಮಿನನ ಇರುವಿಕೆ ಗುರುತರವಾಗಿ ಕಾಣುತ್ತಿತ್ತು. ಯೋಸೇಫನ ಎದುರು ಎಲ್ಲರೂ ನಿಂತಾಗ ಯೋಸೇಫನು ನೋಡಿದ್ದು ಕೇವಲ ಬೆನ್ಯಾಮಿನನನ್ನು ಮಾತ್ರ (ಆದಿ 43:16). ಅವನನ್ನು ಮಾತ್ರ "ಸೋದರ"ನೆಂದು

ಕರೆಯುತ್ತಾನೆ (ಆದಿ 43:29). ಬೆನ್ಯಾಮಿನನನ್ನು ಹೆಸರಿಟ್ಟು ಕರೆದರೆ, ಇತರರನ್ನು ಹಾಗೆ ಕರೆದದ್ದು ಬರೆಯಲಾಗಿಲ್ಲ; ಬದಲಿಗೆ 'ಮನುಷ್ಯರು' ಎಂದು ಗುರುತಿಸುತ್ತಾನೆ (ಆದಿ 43:16).

ಯೋಸೇಫನು ಬೆನ್ಯಾಮಿನನನ್ನು "ನನ್ನ ಮಗನೇ" (ಆದಿ 43:29 ಮತ್ತು 22:8 ಹೋಲಿಸಿ) ಎಂದು ತುಂಬು ಒಲವನ್ನು ತೋರಿಸುವನು. ಅವರಿಗೆಲ್ಲ ವಿಶೇಷ ಭೋಜನವನ್ನು ಏರ್ಪಡಿಸುವನು. ಬೆನ್ಯಾಮೀನನು ಇದ್ದದ್ದು ಪ್ರತಿಯೊಂದು ಸನ್ನಿವೇಶದಲ್ಲಿ ವಿಮೋಚನಾರ್ಥವಾಗಿತ್ತು. ಎಲ್ಲಾ ಸಹೋದರರನ್ನು ಅವರ ವಯಸ್ಸಿನ ಪ್ರಕಾರ ಸಾಲಾಗಿ ಕುಳ್ಳಿರಿಸಿ, ಬೆನ್ಯಾಮಿನನಿಗೆ ಐದರಷ್ಟು ಹೆಚ್ಚು ಬಡಿಸಲಾಯಿತು (ಆದಿ 43:33,4). ಆದರೂ ಯೋಸೇಫನ ಈ ರೀತಿಯ ವರ್ತನೆಯಿಂದ ಉಳಿದ ಸೋದರರು, ಬಹಳ ವರ್ಷಗಳ ಹಿಂದೆ ಯೋಸೇಫನ ವಿಷಯದಲ್ಲಿ ಅವರ ತಂದೆಯು ತೋರಿದ ಪಕ್ಷಪಾತದಿಂದಾಂತೆ ಈಗ ಅವರು ಬೇಸರ ಮಾಡಲಿಲ್ಲ. ಆದರೆ ಅವರು ಹೊಟ್ಟೆಕಿಚ್ಚಿನಿಂದ ಯೋಸೇಫನಿಗೂ, ತಮ್ಮ ತಂದೆಗೂ ಬಹಳ ಕೇಡಾಗುವಂತೆ ನಡೆದುಕೊಂಡಿದ್ದರು (ಆದಿ 37:3,4).

"ಬೆನ್ಯಾಮಿನನಿಗೆ ತೋರಿದ ಈ ವಿಶೇಷ ಒಲವಿನಿಂದ, ಆತನು (ಯೋಸೇಫನು) ತನ್ನ ವಿರುದ್ಧ ಅವರು ಹೊಂದಿದ್ದ ದ್ವೇಷ ಹಾಗೂ ಮತ್ಸರವನ್ನು ತಮ್ಮ ಕಿರಿಯ ಸಹೋದರನಲ್ಲಿಯೂ ಹೊಂದಿರುವರೋ ಎಂದು ಖಾತರಿ ಮಾಡಿಕೊಳ್ಳಲು ಬಯಸಿದನು. ಯೋಸೇಫನು ತಮ್ಮ ಭಾಷೆಯನ್ನು ತಿಳಿಯಲಾರನೆಂದು ಇನ್ನೂ ಭಾವಿಸಿ, ತಮ್ಮ ತಮ್ಮಲ್ಲಿ ಸಹೋದರರು ಧಾರಾಳವಾಗಿ ಮಾತಾಡಿಕೊಳ್ಳುತ್ತಿದ್ದರು; ಇದರಿಂದ ಇವರ ನಿಜ ಭಾವನೆಗಳನ್ನು ತಿಳಿಯುವ ಅವಕಾಶವಾಯಿತು. ಆದರೂ ಅವರನ್ನು ಇನ್ನಷ್ಟು ಪರೀಕ್ಷಿಸಬೇಕೆಂದು, ಅವರು ನಿರ್ಗಮಿಸುವ ಮೊದಲು, ಆ ಅತಿ ಕಿರಿಯವನಲ್ಲಿ ತನ್ನದೇ ಪಾನಪಾತ್ರೆಯನ್ನು ಗುಪ್ತವಾಗಿ ಇಟ್ಟು ಕಳುಹಿಸಬೇಕೆಂದು ಅಪ್ಪಣೆ ಕೊಟ್ಟನು" – ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 228, 229.

**ಬುಧವಾರ** **ಜೂನ್ 15**

## ಶಕುನ ನೋಡುವ ಪಾತ್ರೆಯು

ಆದಿಕಾಂಡ 44ನ್ನು ಓದಿರಿ. ಯೋಸೇಫನು ಶಕುನ ನೋಡುವ ಪಾನಪಾತ್ರೆಯನ್ನು

ಬೇರೆಯವರ ಚೀಲಗಳನ್ನು ಬಿಟ್ಟು, ಬೆನ್ಯಾಮಿನನ ಚೀಲದಲ್ಲಿಯೇ ಹಾಕಿಸಿದ್ದು ಯಾಕೆ?

ಈ ಕಥೆಯು ಹಿಂದಿನ ಕಥೆಗೆ ಸಮಾನ ಸದೃಶವಾಗಿದೆ. ಮುಂಚಿನ ಹಾಗೆ ಯೋಸೇಫನು ವಿಶೇಷ ನಿರ್ದೇಶನಗಳನ್ನು ಕೊಟ್ಟನು; ಮತ್ತೊಮ್ಮೆ ಅವರ ಚೀಲಗಳನ್ನು ದವಸಗಳಿಂದ ತುಂಬಿದನು. ಈ ಬಾರಿ, ಮತ್ತೊಂದು ವಿಚಿತ್ರ ಅಪ್ಪಣೆಯನ್ನು ಕೊಟ್ಟು ಬೆನ್ಯಾಮಿನನ ಚೀಲದಲ್ಲಿ ತನ್ನ ಪಾನಪಾತ್ರೆಯನ್ನು ಹಾಕಬೇಕೆಂದು ಅಪ್ಪಣೆ ಕೊಟ್ಟನು.

ಹಾಗಾಗಿ, ಈಗ ಬೇರೊಂದು ರೀತಿಯ ಘಟನೆಗಳು ನಡೆಯುತ್ತವೆ. ಹಿಂದೆ, ಆ ಸೋದರರು ಬೆನ್ಯಾಮಿನನ್ನು ಕರೆತರಲು ಕಾನಾನಿಗೆ ಹೋಗಿ ತಲುಪಿದ್ದರು, ಈಗ ಯೋಸೇಫನ ಎದುರಿಗೆ ನಿಲ್ಲಲು ಐಗುಪ್ತಕ್ಕೆ ಹಿಂತಿರುಗಬೇಕಾಯಿತು. ಹಿಂದಿನ ಬಾರಿ, ಎಲ್ಲರ ಚೀಲದಲ್ಲಿ ಒಂದೇ ವಸ್ತುವನ್ನು ಇಡಲಾಗಿತ್ತು, ಆದರೆ ಈಗ ಬೆನ್ಯಾಮಿನನಲ್ಲಿ ಯೋಸೇಫನ ಪಾತ್ರೆಯು ಇದ್ದದ್ದು ವಿಭಿನ್ನವಾಗಿತ್ತು. ಬೆನ್ಯಾಮಿನನು ಗೌರವಾರ್ಥ ಯೋಸೇಫನ ಪಾತ್ರೆಯಲ್ಲಿ ಕುಡಿಯುವ ಅವಕಾಶ ಹೊಂದಿದ್ದರೂ, ಅನಿರೀಕ್ಷಿತವಾಗಿ ಈಗ ಆ ಅಮೂಲ್ಯ ವಸ್ತುವನ್ನು ಕದ್ದ ಆಪಾದನೆಗೆ ಒಳಗಾಗಿರುವನು. ಆತನೀಗ ಸೆರೆಗೆ ಹೋಗಬೇಕು.

ಶಕುನ ನೋಡುವ ಪಾತ್ರೆಯನ್ನು ಬಳಿಸುತ್ತಿದ್ದನೆಂದರೆ ಆತನಿಗೆ ಶಕುನ ನೋಡುವುದರಲ್ಲಿ ನಂಬಿಕೆಯಿಟ್ಟಿದ್ದನು ಎಂದು ತಿಳಿಯಬಾರದು. ಯೋಸೆಫನು "ಎಂದಿಗೂ ತನಗೆ ಶಕುನ ನೋಡುವ ಶಕ್ತಿಯಿದೆ ಎಂದು ಪ್ರತಿಪಾದಿಸಿದ್ದಿಲ್ಲ, ಆದರೆ ಅವರ ಜೀವಿತಗಳ ಗುಟ್ಟುಗಳನ್ನು ತಿಳಿದುಕೊಳ್ಳುವನು ತನಗೆ ಸಾಧ್ಯವೆಂದು ಅವರು ನಂಬಿಕೊಳ್ಳಬೇಕೆಂದು ನಿರೀಕ್ಷಿಸಿದನು" ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 229.

ಯೋಸೇಫನು ಅವರು ತಮ್ಮ ಪಾಪವನ್ನು ಒಪ್ಪಿಕೊಳ್ಳಲಾಗುವಂತೆ ಈ ರೀತಿ ಯೋಜನೆ ಹಾಕಿದ್ದನು. ಯೆಹೂದನು ದೇವರು ತಮ್ಮ ತಪ್ಪನ್ನು ಬಯಲು ಮಾಡಿದ್ದಾನೆಂದು ಒಪ್ಪಿಕೊಳ್ಳುವುದನ್ನು ಸಮರ್ಥಿಸಿಕೊಳ್ಳಬಹುದಿತ್ತು ಮತ್ತು ಹೀಗೆ ಸಹೋದರರ ಯೋಚನೆಗಳನ್ನು ಪರೀಕ್ಷಿಸಲು ಸಾಧ್ಯವಾಯಿತು.

ಆ ಸಹೋದರರ ಭಾವನೆಗಳು ಮತ್ತು ಅವರ ಪ್ರತಿಕ್ರಿಯೆಗಳು ಅಷ್ಟು ತೀವ್ರಮಟ್ಟದಾಗಿದ್ದದ್ದು ಪ್ರಧಾನವಾದದ್ದೇ. ಅವರೆಲ್ಲರೂ ಅದೇ ನೋವಿನಲ್ಲಿ ಐಕ್ಯ ಆಗಿದ್ದರು, ಏಕೆಂದರೆ ತಪ್ಪಿಲ್ಲದ ಯೋಸೇಫನು ಕಳೆದು ಹೋದಂತೆ ಬೆನ್ಯಾಮಿನನಿಗೂ ಸಹ ಆಗಬಹುದೆಂದು ಭಯಪಟ್ಟರು. ಆಕಾರಣ ಬೆನ್ಯಾಮಿನನ "ಬದಲಾಗಿ" ತನ್ನನ್ನೇ ಗುಲಾಮನಾಗಿ ತೆಗೆದುಕೊಳ್ಳಬೇಕೆಂದು ಕೇಳಿಕೊಂಡನು (ಆದಿ 44:33). ಇದು ತಪ್ಪಿಲ್ಲದ ಇಸಾಕನ ಬದಲು ಬಲಿಕೊಡಲಾದ ಟಗರಿಗೆ ಹೋಲಿಕೆಯಾಗಿದೆ (ಆದಿ 22:13 ರೊಂದಿಗೆ ಹೋಲಿಸಿ). ತನ್ನ ತಂದೆಯ ಮೇಲೆ ಬರುವ ಮಹಾಶೋಕವನ್ನು ತಪ್ಪಿಸಲು ಯೆಹೂದನು ತನ್ನನ್ನೇ, ಬದಲಿಯಾಗಿ, ತ್ಯಾಗರ್ಥವಾಗಿ ಒಪ್ಪಿಸಿಕೊಟ್ಟನು (ಆದಿ 44:34).

ಯೂದನ ಪತ್ರಿಕೆಯಲ್ಲಿ ನಿದರ್ಶನಗೊಂಡಂತೆ, ಈಡುಕೊಡುವ ಪ್ರಕ್ರಿಯೆಯಲ್ಲಿ ಪ್ರೀತಿಯ ಯಾವ ಸೂತ್ರವನ್ನು ಅರ್ಥಮಾಡಿಕೊಳ್ಳಬಹುದು? ರಕ್ಷಣೆಯ ವಿಷಯದ ಬಗ್ಗೆ ಬೈಬಲ್ ಬೋಧನೆಯನ್ನು ಈ ರೀತಿಯ ಪ್ರೀತಿಯು ಹೇಗೆ ವಿವರಿಸುತ್ತದೆ? (ರೋಮ 5:8).

**ಗುರುವಾರ** **ಜೂನ್ 16**

## ನಾನು ನಿಮ್ಮ ಸಹೋದರನಾದ ಯೋಸೇಫನು

ಆದಿಕಾಂಡ 45ನ್ನು ಓದಿರಿ. ಈ ವೃತ್ತಾಂತದಲ್ಲಿ ಪ್ರೀತಿ, ವಿಶ್ವಾಸ ಮತ್ತು ಕೃಪೆಯ ಯಾವ ಪಾಠಗಳನ್ನು ನೋಡಬಹುದು?

"ನನ್ನ ತಂದೆ" (ಆದಿ)ಯ ಮೇಲೆ "ಮಹಾಶೋಕವು ಉಂಟಾಗಬಹುದೆಂದು ಯೆಹೂದನು ಹೇಳಿದಾಗಲೇ (ಆದಿ 44:34) ಯೋಸೇಫನು "ಗಟ್ಟಿಯಾಗಿ ಕೂಗಿಕೊಂಡು ತನ್ನ ಅಣ್ಣತಮ್ಮಂದಿರಿಗೆ ತನ್ನ ಗುರುತು ಸಿಕ್ಕುವ ಹಾಗೆ" ಮಾಡಿದನು (ಆದಿ 45:1). ಈ ಮೂಲಕ ಇಲ್ಲಿಯೂ ದೇವರು ತನ್ನ ನಿಯಮವೇ ಸಾಗುವುದು, ಮನುಷ್ಯರ ಕೆಟ್ಟತನವಲ್ಲ ಎಂಬುದನ್ನು ತೋರಿಸುವುದಕ್ಕೆ ದೇವರು ಈ ಘಟನೆಗಳಲ್ಲಿ ತನ್ನನ್ನೇ ಪ್ರಕಟಿಸಿಕೊಂಡಿದ್ದಾನೆ.

ಯೋಸೆಫನ ಸೋದರರು ತಾವು ಕೇಳಿ ನೋಡುತ್ತಿರುವುದನ್ನು ನಂಬಲಾಗಲಿಲ್ಲ. ಆಕಾರಣ ಪುನಃ ಹೇಳಬೇಕಾಯಿತು: "ನಿಮ್ಮ ತಮ್ಮನಾದ ಯೋಸೇಫನು ನಾನೇ"

ಮತ್ತು ಎರಡನೆಯ ಬಾರಿ ಹೇಳಿ "ನೀವು ಐಗುಪ್ತಕ್ಕೆ ಮಾರಿಬಿಟ್ಟವನು" ತಾನೇ ಎಂದು ಹೇಳಿದಾಗಲೇ ಅವರು ನಂಬಿದರು (ಆದಿ 45:4).

"ದೇವರು ನನ್ನನ್ನು ಮುಂದಾಗಿ ಕಳುಹಿಸಿದನು" (ಆದಿ 45:5) ಎಂದು ಯೋಸೇಫನು ಹೇಳಿದ್ದರಲ್ಲಿ ದೇವರಿಗೆ ಎರಡು ಉದ್ದೇಶಗಳ ಸೂಚನೆಯಾಗಿದೆ. ಇದು ಆತನ ಸೋದರರ ಮೇಲೆ ಯೋಸೇಫನಿಗೆ ಯಾವುದೇ ವೈಮನಸ್ಸಿಲ್ಲ ಎಂಬುದನ್ನು ತೋರುವುದು. ಮತ್ತು ಈ ಮಾತಿನಲ್ಲಿ ಅಡಗಿರುವಂತೆ ಅವರು ಅಂದುಮಾಡಿದ್ದುದು, "ಅವರು ಭೂಮಿಯ ಮೇಲೆ ಉಳಿಯುವಂತೆಯೂ" ಮತ್ತು "ವಿಪತ್ತಿಗೆ ಸಿಕ್ಕದಂತೆ" ಇರಲು ಅವಶ್ಯವಿದ್ದದ್ದನ್ನು ಮಾಡಿರೆಂದು ಹೇಳಿದುದು ನಂಬಿಕೆಯ ಮಹಾಸಮರ್ಥನೆಯೂ ಮತ್ತು ನಿರೀಕ್ಷೆಯ ಉದ್ಗಾರವೂ ಆಗಿದೆ (ಆದಿ 45:7).

ನಂತರ ಯೋಸೇಫನು ತನ್ನ ಸೋದರರು ತನ್ನ ತಂದೆಯ ಬಳಿಗೆ ಬೇಗನೆ ಹಿಂತಿರುಗಿ, ಆತನನ್ನು ಐಗುಪ್ತಕ್ಕೆ ಕರೆತರಲು ಹೇಳುತ್ತಾನೆ. ನುಡಿಯಲ್ಲಿ ನಿರ್ದಿಷ್ಟವಾಗಿ ಅವರು ವಾಸಿಸುವ ಸ್ಥಳ ಐಗುಪ್ತದ "ಉತ್ತಮ ಸ್ಥಳವಾದ" ಹೆಚ್ಚು ಹುಲ್ಲುಗಾವಲು ಹೊಂದಿದ "ಗೋಷೆನ್" ಸೀಮೆಯೇ ಎಂದು ತಿಳಿಸಲಾಯಿತು (ಆದಿ 45:10,18). ಅವರ ಸಾಗಾಣಿಕೆಗೂ ಸಹ ಏರ್ಪಾಡು ಮಾಡಿದನು; ರಥಗಳನ್ನು ಕಳುಹಿಸಿದನು. ಇದನ್ನೆಲ್ಲಾ ನೋಡಿದ ಯಾಕೋಬನು, ತನ್ನ ಮಕ್ಕಳು ಅನುಭವಿಸಿದ ಈ ಸಂಗತಿಗಳೆಲ್ಲ ಎಂದು ನಂಬಲು ಸಾಧ್ಯವಾಯಿತು. ಇದು ಯೋಸೇಫನು ಜೀವಿಸುತ್ತಿರುವನೆಂದು ನಂಬಲು ಯಾಕೋಬನಿಗೆ ತೋರಿತು, ಮತ್ತು ಅವನ ಬಳಿಗೆ ಜೀವಂತ ಹೋಗಲು ಸಾಧ್ಯಮಾಡಿತು (ಆದಿ 37:35 ಮತ್ತು 44:29 ಹೋಲಿಸಿರಿ).

ಈಗ ಎಲ್ಲವೂ ಒಳ್ಳೆಯದಾಗಿದೆ. ಯಾಕೋಬನ 12 ಮಕ್ಕಳು ಬದುಕುಳಿದಿದ್ದಾರೆ. ಯಾಕೋಬನು ಈಗ 'ಇಸ್ರಾಯೇಲ್' ಎಂದು ಕರೆಯಲ್ಪಟ್ಟು (ಆದಿ 45:28), ದೇವರ ಅನುಗ್ರಹವು ಬಹಳ ಪ್ರಬಲವಾಗಿ ತೋರಿಬಂದಿದೆ.

ಹೌದು, ಯೋಸೇಫನು ತನ್ನ ಸಹೋದರರಿಗೆ ಕರುಣೆ ತೋರಿದನು. ಹಾಗೆ ಮಾಡಲು ಅವನಿಗೆ ಸಾಧ್ಯವಿತ್ತು. ಯೋಸೇಫನಿಗೆ ಕೆಟ್ಟದ್ದೆಲ್ಲವೂ ಒಳ್ಳೆಯದಾದ ಹಾಗೆ ನಮಗಾಗದಿದ್ದರೂ ನಾವು ಇತರರು ನಮಗೆ ಮಾಡಿದ ದುಷ್ಟತನಕ್ಕೆ ನಾವು ಹೇಗೆ ಕರುಣೆ ತೋರಬಹುದು?

**ಶುಕ್ರವಾರ** **ಜೂನ್ 17**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟ್ "ಐಗುಪ್ತದಲ್ಲಿ ಯೋಸೇಫನು" ಪುಟ 213–223; "ಯೋಸೇಫನು ಮತ್ತು ಆತನ ಸಹೋದರರು" ಪುಟ 224–232, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಇವುಗಳನ್ನು ಓದಿರಿ.

"ಯಾಕೋಬನ ಮಕ್ಕಳಿಗೆ ಆ ಮೂರು ದಿನಗಳ ಸೆರೆವಾಸವು ತೀವ್ರ ದುಃಖದ ದಿನಗಳಾಗಿದ್ದವು. ಅವರು ತಮ್ಮ ಹಿಂದಿನ ದುರ್ಮಾರ್ಗಗಳನ್ನು, ವಿಶೇಷವಾಗಿ ಯೋಸೇಫನಿಗೆ ತೋರಿದ ಕ್ರೂರತೆಯನ್ನು ಅವಲೋಕಿಸಿದರು. ಅವರು ಗೂಢಾಚಾರರೆಂದು ತೀರ್ಪಿಗೊಳಗಾದರೆ, ತಮ್ಮನ್ನು ನಿರ್ದೋಷಿಗಳೆಂದು ಸ್ಥಾಪಿಸಿಕೊಳಲು ಸಾಕ್ಷಿ ಕೊಡಲಾಗದೆಂದು ತಿಳಿದಿದ್ದರು; ಮತ್ತವರು ಸಾಯಬೇಕು, ಅಥವಾ ಗುಲಾಮರಾಗಬೇಕು. ಅವರಲ್ಲಿ ಯಾರೊಬ್ಬರು ತಮ್ಮ ತಂದೆಗೆ, ಬೆನ್ಯಾಮಿನನನ್ನು ಅವನಿಂದ ಕರೆದೊಯ್ಯಲು ಯಾವುದೇ ರೀತಿಯ ಪ್ರಯತ್ನ ಮಾಡಿದರೂ ಫಲಿಸುವುದೆಂದೋ ಎಂದು ಸಂದೇಹಪಟ್ಟರು; ಏಕೆಂದರೆ, ಯಾಕೋಬನು ನೆನೆಸಿರುವಂತೆ, ಯೋಸೇಫನು ಬಹಳ ಕ್ರೂರಮರಣಕ್ಕೆ ತುತ್ತಾಗಿದ್ದುದರಿಂದ ಅದು ಅಸಾಧ್ಯವಾಗಿತ್ತು. ಯೋಸೇಫನು ಗುಲಾಮನಾಗುವಂತೆ ಮಾರಿದ್ದರು ಮತ್ತು ತಾವು ಕೂಡ ಗುಲಾಮರಾಗಿಸ ಮಾಡಿ ದೇವರು ತಮ್ಮನ್ನು ದಂಡಿಸುವುದಕ್ಕೆ ಯೋಜಿಸಿರುವನು ಎಂದು ಭಯಪಟ್ಟರು. ಯೋಸೇಫನು ತನ್ನ ತಂದೆಯೂ ಮತ್ತು ಸೋದರರ ಕುಟುಂಬಗಳು, ಊಟಕ್ಕಾಗಿ ಕಷ್ಟಪಡುತ್ತಿರಬಹುದೆಂದು ಪರಿಗಣಿಸಿದನು, ಮತ್ತು ತನಗೆ ಮಾಡಿದ ಆ ಕ್ರೂರತನಕ್ಕೆ ಪಶ್ಚಾತ್ತಾಪ ಪಟ್ಟಿರುವರೆಂದು ಮತ್ತು ತನಗೆ ಮಾಡಿದ ಹಾಗೆ ಅವರು ಬೆನ್ಯಾಮಿನನಿಗೆ ಮಾಡುವುದಿಲ್ಲವೆಂದು ಮನಗಂಡನು"–ಎಲೆನ್ ಜಿ ವೈಟ್, ಸ್ಪರಿಚುವಲ್ ಗಿಫ್ಟ್, ಪುಸ್ತಕ 3, ಪುಟ 155, 156.

"ಯೋಸೇಫನು ತೃಪ್ತನಾದನು. ತನ್ನ ಅಣ್ಣಂದಿರನ್ನು ಪರೀಕ್ಷಿಸಿ ನೋಡಿ, ಅವರು ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟಿರುವ ನಿಜ ಫಲಗಳನ್ನು ಅವರಲ್ಲಿ ಕಂಡಿದ್ದನು"–ಎಲೆನ್ ಜಿ ವೈಟ್, ಸ್ಪಿರಿಚ್ಯುವಲ್ ಗಿಫ್ಟ್ಸ್, ಪುಸ್ತಕ 3, ಪುಟ 165.

## ಚರ್ಚಿಸಬೇಕಾದ ಪ್ರಶ್ನೆಗಳು

1. ಸಭೆಯಲ್ಲಿ ಗುರುವಾರದ ಅಂತ್ಯಕ್ಕೆ ಇರುವ ಪ್ರಶ್ನೆಯ ಬಗ್ಗೆ ಚರ್ಚಿಸಿರಿ. ಯೋಸೇಫನಿಗೆ ಎಲ್ಲವೂ ಒಳ್ಳೆಯದಾಗದಿದ್ದರೆ, ಆತನು ತನ್ನ ಸಹೋದರರಿಗೆ

ಹಾಗೆ ಬಹಳ ಕರುಣಾಮಯಿಯಾಗಿಯೇ ಇರುತ್ತಿದ್ದನೆಂದು ಯೋಚಿಸುವಿರಾ? ಇದರ ಬಗ್ಗೆ ನಾವು ಖಚಿತವಾಗಿ ತಿಳಿಯಲಾರೆವಾದರೂ ಯಾವುದೇ ಕುರುಹುಗಳಿಂದ ಈ ಸಂಪೂರ್ಣ ಕಥೆಯಲ್ಲಿ ನಾವು ಕಾಣುವ ಹಾಗೆ ಯೋಸೇಫನ ದಯಾಸ್ವಭಾವವು ಇದೆಯೆಂದು ತಿಳಿಯಲು ಅವನ ಮಮತೆಯ ಗುಣಕ್ಕೆ ಪುಷ್ಟಿಕೊಡುವ ಅಂಶಗಳೇನು?

2. ಯೇಸುಕ್ರಿಸ್ತನು ಮತ್ತು ಆತನು ಅನುಭವಿಸಿದುದರ ಪೂರ್ವಸೂಚಿ ಅಂಶಗಳನ್ನು ಯೋಸೆಫನಲ್ಲಿ ನಾವು ಕಾಣಬಹುದು?

3. ಯೋಸೇಫನು ತನ್ನ ಸಹೋದರರನ್ನು ಪರೀಕ್ಷಿಸಿದನು. ಹಾಗೆಯೇ ದೇವರು ನಮ್ಮನ್ನು ಯಾವ ವಿಧಾನಗಳಲ್ಲಿ ಪರೀಕ್ಷಿಸುವನು?

4. ಅಷ್ಟು ವರುಷಗಳ ನಂತರವೂ, ಆ ಸಹೋದರರು ಯೋಸೇಫನಿಗೆ ಮಾಡಿದ ಅಪರಾಧವನ್ನು ತಿಳಿದುಕೊಂಡರು. ಅಪರಾಧ ಪ್ರಜ್ಞೆಯು ಎಷ್ಟು ಪ್ರಬಲವೆಂದು ಇದು ಹೇಗೆ ತೋರಿಸುವುದು? ಮತ್ತು ನಾವು ಕ್ಷಮಾಪಣೆ ಹೊಂದಿ, ದೇವರ ಕ್ಷಮೆಯನ್ನು ಸ್ವೀಕರಿಸಿದರೂ, ನಮ್ಮನ್ನು ನಾವೇ ಕ್ಷಮಿಸಿಕೊಳ್ಳಲು ಬಹುಶಃ ಆ ಕ್ಷಮಾಪಣೆಗೆ ಎಷ್ಟೇ ಅನರ್ಹರಾಗಿದ್ದರೂ ಹೇಗೆ ಕಲಿತುಕೊಳ್ಳಬಹುದು?